ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋನ್ : 114

ನೇವರ್ಷ 41ನೇ ಸಂಚಿಕೆ ಕೊಪ್ಪ 10-6-1990 ಭಾನುವಾರ ಬೆಲೆ 60 ಪೈಸೆ

ಮಾಜಿ ಗೇಣಿದಾರರ ಕಂತು: ಒಂದು ವಿವರಣೆ

ಭೂಸುಧಾರಣೆಯಲ್ಲಿ ಜಮೀನು ಪಡೆದ ಮಾಜಿ ಗೇಣಿದಾರರ ಕಂತು ಪಾವತಿ ಬಗ್ಗೆ ಹಲವು ರೈತರಲ್ಲಿ ಇರುವ ಸಂದೇಹಗಳ ಬಗ್ಗೆ ಕೊಪ್ಪ ತಹಸೀಲ್ದಾರರು 'ಮುಂಜಾವು'ಗೆ ಈ ಕೆಳಗಿನಂತೆ ವಿವರಣೆ ಕೊಟ್ಟಿದ್ದಾರೆ.

ಗೇಣಿ ಭೂಮಿಗೆ ಪರಿಹಾರ 2000 ರೂ. ಅಥವಾ ಅದಕ್ಕಿಂತ ಕಡಿಮೆ ನಿಗದಿಯಾಗಿದ್ದರೆ ಅದಕ್ಕೆ ಒಂದೇ ಕಂತು. 2000 ರೂ.ಗಿಂತ ಹೆಚ್ಚಿಗೆ ನಿಗದಿಯಾಗಿದ್ದರೆ, ಒಂದು ಕಂತಿನಲ್ಲಿ 2000 ರೂ ಕಟ್ಟಿ, ಮಿಕ್ಕ ಹಣಕ್ಕೆ 20 ಕಂತುಗಳ ಅವಕಾಶ. ಇದನ್ನು ಆಯಾ ವರ್ಷವೇ ಬಡ್ಡಿ ಸಮೇತ ಕಟ್ಟಬೇಕಿತ್ತು. 1984ರ ನಂತರದ ಕಂತುಗಳನ್ನು ಆಗಿನ ಜನತಾ ಸರ್ಕಾರ ಮನ್ನಾ ಮಾಡಿದೆ. ಆದರೆ ಅವರೆಗಿನ ಕಂತುಗಳು ಬಾಕಿಯಿದ್ದಲ್ಲಿ ಅದನ್ನು ಬಡ್ಡಿ ಸಹಿತ **ಒಂದೇ ಕಂತಿನಲ್ಲಿ** ಕಟ್ಟಲೇಬೇಕಿದೆ. ಅದಕ್ಕೆ ಪುನಃ ಕಂತುಗಳು ದೊರೆಯುವುದಿಲ್ಲ.

"10 ಎಕರೆಗಿಂತ ಕಡಿಮೆ ಭೂಮಿ ಹೊಂದಿರುವವರಿಗೆ...." ಎಂದು ಆಗಾಗ ಸರ್ಕಾರಿ ಮತ್ತು ರಾಜಕೀಯ ವಲಯದಲ್ಲಿ ಕೇಳಿ ಬರುವುದು ಬಯಲುನಾಡಿನ ಖುಷ್ಕಿ ಭೂಮಿಯನ್ನು ಕುರಿತದ್ದು. ತರಿ, ಬಾಗಾಯ್ತು ಮತ್ತು ಮಲೆನಾಡಿನ ಇತರ ವಿಧದ ಜಮೀನುಗಳಿಗೆ ಈ ಮಿತಿ ತತ್ಸಮಾನವಾಗಿ ನಿಗದಿಗೊಳಿಸಲ್ಪಟ್ಟಿದೆ. ತರಿಗೆ ಸುಮಾರು ಎರಡೂವರೆ ಎಕರೆ, ಬಾಗಾಯ್ತು ಅರ್ಧ ಎಕರೆ— ಹೀಗೆ ಈ ಮಿತಿ ನಿರ್ಧರಿಸಲ್ಪಟ್ಟಿದೆ

ಗ್ರಾಮೀಣ ರಸ್ತೆ ಆಮೂಲಾಗ್ರ ದುರಸ್ತಿಗೆ ಆಗ್ರಹ

ಶೃಂಗೇರಿ : ಇಲ್ಲಿಂದ ಜಯಪುರಕ್ಕೆ ಹೋಗುವ ಮಾರ್ಗದ ಮೆಣಸೆಯಿಂದ ಕೊಪ್ಪ-ಚಿಕ್ಕಮಗಳೂರು ರಸ್ತೆಯಲ್ಲಿನ ಬಿ ಜಿ. ಕಟ್ಟೆಗೆ ಸಂಪರ್ಕ ಕಲ್ಪಿಸುವ 20 ಕಿ.ಮೀ. ಉದ್ದದ ರಸ್ತೆಯನ್ನು ಆಮೂಲಾಗ್ರವಾಗಿ ದುರಸ್ತಿ ಮಾಡಿಸುವಂತೆ ಈ ಭಾಗದ ಗ್ರಾಮಸ್ಥರು ಜಿ.ಪ. ಅಧ್ಯಕ್ಷರನ್ನು ಒತ್ತಾಯಿಸಿದ್ದಾರೆ.

ಅತ್ಯಂತ ದುರ್ಗಮವಾದ, ಬೇರೆ ಸಾರಿಗೆ ವ್ಯವಸ್ಥೆಯೇ ಇಲ್ಲದ ಮಸಿಗೆ, ಕಾನೊಳ್ಳಿ, ಬಾಗೋಡು, ಹಾಲಗಾರು, ಸುಳಗೋಡು, ಕೂಗಲು, ವಿಶ್ವನಾಥಪುರಗಳ ಮೂಲಕ ಹಾದು ಹೋಗುವ ಈ ರಸ್ತೆ 12 ಸಾವಿರ ಜನರಿಗೆ ಉಪಯುಕ್ತವಾಗುವಂಥದು. ಹತ್ತು ವರ್ಷಗಳ ಹಿಂದೆಯೇ ಇದಕ್ಕೆ ಜಲ್ಲಿ ಹಾಕಿದ್ದರೂ ಆಗಿನ ಕಂಟ್ರಾಕ್ಟರ್ ಮತ್ತು ಅಧಿಕಾರಿಗಳ ಭ್ರಷ್ಟತೆಯಿಂದಾಗಿ ವಿಶ್ವನಾಥಪುರ - ಬಾಗೋಡು ನಡುವಿನ 5 ಕಿ.ಮೀ. ದೂರವಂತೂ ತೀರಾ ಕಳಪೆಯಾಗಿ, ವಾಹನ ಸಂಚಾರಕ್ಕೆ ಅಪಾಯಕರವಾಗಿದೆ ಎಂದಿದ್ದಾರೆ

ಈ ರಸ್ತೆಯಲ್ಲಿ ಬಸ್ ಓಡಿಸಲು ಈಗಾಗಲೇ ಸಾರಿಗೆ ಸಂಸ್ಥೆಯೊಂದಕ್ಕೆ ಪರ್ಮಿಟ್ ಆಗಿದ್ದರೂ, ರಸ್ತೆ ಸರಿಯಿಲ್ಲದ ಕಾರಣ ಅವರು ಬಸ್ ಓಡಿಸುತ್ತಿಲ್ಲ ಆದ್ದರಿಂದ ಸಾಧ್ಯವಿರುವ ಕಡೆಗಳಲ್ಲೆಲ್ಲ 1) ಏರುಗಳನ್ನು ತಗ್ಗಿಸುವುದು, 2) ತಿರುವು ನೇರಗೊಳಿಸುವುದು, 3) ಕಿರಿದಾಗಿರುವೆಡೆ ಅಗಲಗೊಳಿಸುವುದು, ಹಾಗೂ ಹಲವಾರು ಕಡೆ ಮೋರಿ ನಿರ್ಮಾಣ ಮತ್ತು ಹಿಂದೆ ನಾಮಕಾವಾಸ್ತೆಗೆ ಹಾಕಿದ್ದ ಜಲ್ಲಿ ಎಲ್ಲಾ ಕಡೆ ಎದ್ದು ಹೋಗಿರುವುದರಿಂದ ಪುನಃ ಜಲ್ಲಿ ಹಾಕಿಸುವುದು— ಇವಿಷ್ಟು ಕಾಮಗಾರಿಗಳನ್ನು ತುರ್ತಾಗಿ ಮಾಡಿಸಬೇಕೆಂದು ಇನ್ನೂರಕ್ಕೂ ಹೆಚ್ಚು ಜನ ಸಹಿ ಹಾಕಿದ ಮನವಿಯಲ್ಲಿ ಒತ್ತಾಯಿಸಲಾಗಿದೆ

ಅರಣ್ಯ ಅಪರಾಧದ ಎರಡು ಪ್ರಕರಣ :

ಟ್ರಾಕ್ಟರ್, ಕಾರು ವಶ; ಇಬ್ಬರ ಬಂಧನ

ಬಿಳಾಲುಕೊಪ್ಪ : ಬಸರಿಕಟ್ಟೆಯ ಕಂಟ್ರಾಕ್ಟರ್ ಚನ್ನಕೇಶವ ಅವರು ಇಲ್ಲಿಗೆ ಸಮೀಪದ ಸರ್ಕಾರಿ ಕಾಡಿನಲ್ಲಿ ಕಡಿಸಿದ್ದೆನ್ನಲಾದ ನಾಟವನ್ನು ಏ. 28ರಂದು ಟ್ರಾಕ್ಟರ್‌ನಲ್ಲಿ ಸಾಗಿಸುತ್ತಿದ್ದಾಗ ಸ್ಥಳೀಯರು ಅದನ್ನು ತಡೆದು ಅರಣ್ಯ ಸಿಬ್ಬಂದಿಗೆ ತಿಳಿಸಲಾಗಿ, ರೇಂಜರ್ ಶ್ರೀನಿವಾಸರಾವ್ ಮತ್ತು ಸ್ಕ್ವಾಡ್ ಸಿಬ್ಬಂದಿ ನಾಟವನ್ನೂ ಟ್ರಾಕ್ಟರನ್ನೂ ಮುಟ್ಟುಗೋಲು ಹಾಕಿಕೊಂಡಿದ್ದರು ಟ್ರಾಕ್ಟರು ಜಖಂ ಆಗಿದ್ದುದರಿಂದ ಅದನ್ನು ಕೊಪ್ಪಕ್ಕೆ ತಾನೇ ತರುವುದಾಗಿ ಚನ್ನಕೇಶವ ಒಪ್ಪಿಕೊಂಡಿದ್ದರೆಂದೂ, ಒಂದು ತಿಂಗಳು ಅವಕಾಶ ಕೊಟ್ಟರೂ ತಾರದಿದ್ದಾಗ, ಜೂನ್ 5ರಂದು ಎಸಿಎಫ್ ಬಾಲಕೃಷ್ಣ ಅವರು ತಮ್ಮ ಸಿಬ್ಬಂದಿಯೊಂದಿಗೆ ಅದನ್ನು ಒಯ್ಯುದ ತರಲು ಹೋದ ವೇಳೆ ಚನ್ನಕೇಶವನ ಕಡೆಯವರು ಅಡ್ಡಿ ಪಡಿಸಿದ್ದು, ಜೂನ್ 6ರಂದು ಪೋಲೀಸ್ ನೆರವಿನೊಡನೆ ಅದನ್ನು ಮುಟ್ಟುಗೋಲು ಹಾಕಿಕೊಂಡು ತರಲಾಗಿದೆ ಚನ್ನಕೇಶವ ಮತ್ತಿತರರ ಮೇಲೆ ಮೊಕದ್ದಮೆ ಹೂಡಲಾಗಿದೆ.

ಗಂಧ ಚೋರನೋ
ಕಾಲೇಜು ಉಪನ್ಯಾಸಕನೋ !

ಬಾಳೆಹೊನ್ನೂರು ಕಿರಿಯ ಕಾಲೇಜು ಉಪನ್ಯಾಸಕ ಉಪ್ಪಿನಂಗಡಿಯ ಸುಬ್ರಮಣ್ಯನಿಗೆ ಸೇರಿದ್ದೆನ್ನಲಾದ ಅಂಬಾಸೆಡರ್ ಕಾರಿನಲ್ಲಿ 15 ಸಾವಿರ ರೂ. ಬೆಲೆಯ 175 ಕಿಲೊ ಗಂಧ ಸಾಗಿಸುತ್ತಿದ್ದುದನ್ನು ಗಸ್ತಿನಲ್ಲಿದ್ದ ರೇಂಜರ್ ಇಸ್ಮಾಯಿಲ್ ಮತ್ತು ಸಿಬ್ಬಂದಿ ಮಾಗುಂಡಿ ಬಳಿ ಜೂನ್ 4ರ ಬೆಳಗಿನ ಜಾವ ವಶಪಡಿಸಿಕೊಂಡು, ಅಬ್ಬಾಸ್ ಮತ್ತು ಸುಲೇಮಾನ್ ಎಂಬಿಬ್ಬರನ್ನು ಬಂಧಿಸಿದ್ದಾರೆ.

ಕಾರಿಗೆ ಮುಂಚೂಣಿಯಲ್ಲಿ ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದ ಸುಬ್ರಮಣ್ಯನ ತಮ್ಮ ಉಮಾನಾಥ ಹಾಗೂ ತಂಡದ ಇನ್ನೊಬ್ಬ ಆರೋಪಿ ಜಯೇಂದ್ರ ತಪ್ಪಿಸಿಕೊಂಡಿದ್ದಾರೆ. ತನಿಖೆ ಮುಂದುವರಿದಿದೆ.

ಮರ-ಗಿಡ ಬೆಳೆಸಲು ಉಚಿತ ಸಸಿ ನೀಡಿಕೆ

ಕೊಪ್ಪ : ಸಾಮಾಜಿಕ ಅರಣ್ಯ ಯೋಜನೆಯಡಿ ಮರ-ಗಿಡ ಬೆಳೆಸ ಬಯಸುವವರಿಗೆ ಉಚಿತ ಸಸಿಗಳನ್ನು ಜಿಲ್ಲಾ ಪರಿಷತ್ ವಲಯ ಅರಣ್ಯಾಧಿಕಾರಿಯವರು ನಗಲಾಪುರದ ಬಳಿಯ ನರಸೀಪುರದ ಶಾಖಾ ಸಸ್ಯಕ್ಷೇತ್ರ ಹಾಗೂ ವಿವಿಧ ಸಾನ್ ನರ್ಸರಿಗಳಿಂದ ವಿತರಿಸುವರು.

ಒಬ್ಬ ರೈತರಿಗೆ ಗರಿಷ್ಠ 250 ವಿವಿಧ ಜಾತಿಯ ಅಪೇಕ್ಷಿಸಿದ ಸಸಿಗಳು ಉಚಿತ. ಅದಕ್ಕಿಂತ ಹೆಚ್ಚಿಗೆ 750 ರ ವರೆಗೆ ಶೇ. 50 ರಷ್ಟು ದರದಲ್ಲಿ ಹಾಗೂ 750 ಕ್ಕಿಂತ ಹೆಚ್ಚು ಬೇಕಿದ್ದಲ್ಲಿ ಪೂರ್ತಿ ದರದಲ್ಲಿ ಸಸಿಗಳನ್ನು ನೀಡಲಾಗುವುದು.

ಈಗಾಗಲೇ ವಿತರಣೆ ಆರಂಭವಾಗಿದ್ದು, ಆಸಕ್ತ ರೈತರು ತಮ್ಮ ಅರ್ಜಿಗಳನ್ನು ವಲಯ ಅರಣ್ಯಾಧಿಕಾರಿ, (ಜಿಲ್ಲಾ ಪರಿಷತ್), ಕೊಪ್ಪ-ಇವರಿಗೆ ಸಲ್ಲಿಸಬಹುದು.

ಸಿಲ್ವರ್, ಗೇರು (ಉಳ್ಳಾಲದ ಸಂಶೋಧನಾ ಕೇಂದ್ರದ್ದು) ಸಾಗುವಾನಿ, ಅಂಟುವಾಳ, ಬಳಂಜಿ, ಮಹಾಗನಿ, ಹಲಸು, ನೇರಲು, ಹೆಬ್ಬಲಸು, ಹೊಣಸೆ, ಜಕರಂದ, ಸಂಪಗೆ, ನಂದಿ, ಮತ್ತಿ, ಹೊನ್ನೆ, ಮಾವು, ಇತ್ಯಾದಿ 52 ಬಗೆಯ ನಾಟ, ಮೇವು ಹಾಗೂ ಉರುವಲು ಜಾತಿಯ ಸಸಿಗಳಿವೆ.

ವಿಶೇಷ ಅಕ್ಕಿ ಉತ್ಪಾದನೆ ಸೌಲಭ್ಯ, ರಿಯಾಯ್ತಿಗಳು

ಶೃಂಗೇರಿ : ವಿಶೇಷ ಅಕ್ಕಿ ಉತ್ಪಾದನೆ ಯೋಜನೆಯಡಿ ಬಿತ್ತನೆ ಬೀಜಕ್ಕೆ ಪ್ರತಿ ಕ್ವಿಂಟಾಲಿಗೆ 200 ರೂ. ಗಳಂತೆ ಸಹಾಯಧನ ಹಾಗೂ ಶೇ. 50ರ ರಿಯಾಯ್ತಿಯಲ್ಲಿ ಸತುವಿನ ಸಲ್ಫೇಟ್, ಕಳೆ ನಾಶಕ ಮತ್ತು ಸಸ್ಯ ಸಂರಕ್ಷಣೆ ಔಷಧಿಗಳು ಎಲ್ಲಾ ವರ್ಗದ ರೈತರಿಗೂ ದೊರೆಯುತ್ತವೆ. ಬಿತ್ತನೆ ಬೀಜಗಳನ್ನು ತಾ. ವ್ಯ. ಮಾ ಸ. ಸಂಘ ಮತ್ತು ಆಗ್ರೋ ಕೇಂದ್ರಗಳಲ್ಲಿ ಸಂಗ್ರಹಿಸಿದ್ದು, ರೈತರು ಆಯಾ ಮಂಡಲ ಕೃಷಿ ಸಹಾಯಕರಿಂದ ಪರವಾನಗಿ ಪಡೆದು ಪಡೆದುಕೊಳ್ಳಬಹುದೆಂದು ಶೃಂಗೇರಿ ಮತ್ತು ಕೊಪ್ಪ ಸಹಾಯಕ ಕೃಷಿ ನಿರ್ದೇಶಕರುಗಳು ತಿಳಿಸಿದ್ದಾರೆ.

ಶೃಂಗೇರಿ, ಕೊಪ್ಪ, ನ. ರಾ. ಪುರ ತಾ||ಗಳಿಂದ

ನವೋದಯ ಶಾಲೆಗೆ ತೇರ್ಗಡೆಯಾದವರು

ಕೊಪ್ಪ : ಕಾಫಿ ಸಂಶೋಧನಾ ಕೇಂದ್ರದ ನವೋದಯ ಶಾಲೆಗೆ ಶೃಂಗೇರಿ, ಕೊಪ್ಪ, ನ.ರಾ. ಪುರ ತಾ||ಗಳಿಂದ 24 ಮಂದಿ ಮಕ್ಕಳು ಆಯ್ಕೆಯಾಗಿದ್ದಾರೆ (ತಾತ್ಕಾಲಿಕ) ವಿವರ ಇಲ್ಲಿದೆ. (ಆವರಣದಲ್ಲಿರುವುದು ಮಗುವಿನ ತಂದೆ ಅಥವಾ ತಾಯಿಯ ಹೆಸರು)

ಶೃಂಗೇರಿ (4)

ಶಿವಸ್ವಾಮಿ (ಹೊಸಕೊಪ್ಪ ಶೇಷಗಿರಿಯಪ್ಪ), ಪೂರ್ಣಿಮಾ (ಎಂ. ವಿ. ರಾಮಚಂದ್ರಯ್ಯ, ಹೊಸಕೊಪ್ಪ), ಸಂಧ್ಯಾ (ಯು. ಎಸ್ ಐತಾಳ್) ಚೇತನ್ ಪ್ರಸಾದ್ (ಎಚ್. ಡಿ. ಪ್ರಭಾಕರ್, ಶೃಂಗೇರಿ)

ಕೊಪ್ಪ (15)

ಅಜಿತ್ (ಅನಂತ ಶೆಣೈ), ಚಂದನ್ (ಜಗದೀಶ್ ನಾಯಕ್). ಚಂದ್ರಧರ (ಟಿ. ರಾಜಶೇಖರ್), ಸಂಗೀತಾ (ನಾರಾಯಣ ಪಿಳ್ಳೈ) --ಎಲ್ಲ ಕೊಪ್ಪ; ಬಿ. ವಿ. ಎಸ್. ಕುಮಾರ್ (ಬಿ. ವಿ. ತುಂಗ), ಅಜಯ ಕುಮಾರ್ (ಬಿ. ಜಿ ನಾಗೇಶ್ ರಾವ್), ಸೌಮ್ಯ (ದೊಡ್ಡ ಗೌಡರ್), ಜರೀನಾ (ಅಬ್ದುಲ್‌ಹಮೀದ್)—ಎಲ್ಲ ಹರಿಹರಪುರ; ಪನ್ನಗದತ್ತ (ಕತ್ತಲಗಿರಿ ಶಿವಸ್ವಾಮಿ), ಪ್ರೀತಿ (ದಕ್ಷಿಣಾಮೂರ್ತಿ). ಜಯಪುರ; ಆಶಾ (ಅಣ್ಣಿ ಪೂಜಾರಿ), ಗುಣವಂತೆ; ನಾಗಲಕ್ಷ್ಮಿ (ವೆಂಕಟೇಶಯ್ಯ), ಗುಡ್ಡೇತೋಟ; ದತ್ತಾತ್ರೇಯ ಅಮ್ಮನಭಾವಿ (ಶ್ರೀಮತಿ ಪ್ರಭಾವತಿ), ಬಸರಿಕಟ್ಟೆ; ರವಿ (ಆರ್ಮುಗಂ) ಅಗಳಗಂಡಿ; ಕೃಷ್ಣರಾಜ (ಅಪ್ಪು), ಹುಲಿಗರ್ಡಿ.

ನ. ರಾ. ಪುರ (5)

ಮನೋಜ್ (ರಾಯಪ್ಪಗೌಡ), ಪ್ರಮೋದ (ರಾಮದಾಸರಾವ್), ಬಾಳೆಹೊನ್ನೂರು: ರಶ್ಮಿ (ಸಿ. ರಾಮಚಂದ್ರ), ಸಿಬಿಕುಮಾರ್ (ಕೆ. ವಿ ಜೋನಿ), ನ. ರಾ. ಪುರ; ಸಂದೀಪ್ ಕುಮಾರ್ (ಗೋಪಾಲಗೌಡ), ಬಿ. ಕಣಬೂರು

ಅಯೊಡೀನ್ ಇಲ್ಲದ ಉಪ್ಪು ಮಾರಾಟ ನಿಷೇಧ

ಕೊಪ್ಪ : ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಅಯೊಡೀನ್ ಇರುವ ಉಪ್ಪನ್ನೇ ಎಲ್ಲಾ ಅಂಗಡಿಗಳವರೂ ಮಾರಬೇಕೆಂದೂ ಸಾದಾ ಉಪ್ಪನ್ನು ಮಾರಬಾರದೆಂದೂ ರಾಜ್ಯದ ಆರೋಗ್ಯ, ಕುಟುಂಬ-ಕಲ್ಯಾಣ ಮತ್ತು ಆಹಾರ ನಿರ್ದೇಶಕರು ಆದೇಶ ಹೊರಡಿಸಿದ್ದು, ಅಯೋಡೀನ್ ಉಳ್ಳದಿಲ್ಲದ ಸಾದಾ ಉಪ್ಪನ್ನು ಮಾರಾಟ ಮಾಡುವ ವ್ಯಾಪಾರಿಗಳ ವಿರುದ್ಧ 1954ರ ಪಿ. ಎಫ್. ಎ. ಕಾಯ್ದೆಯನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ತಹಸೀಲ್ದಾರ್ ತಿಳಿಸಿದ್ದಾರೆ.

ಗಾದೆಗಳಲ್ಲಿ ಜನಪದರು ಕಂಡ ಮಳೆ ಮತ್ತು ಒಕ್ಕಲುತನದ ಬದುಕಿನ ಹಾಸು - ಹೊಕ್ಕು

ಗಾದೆಗಳು ಮಾನವನು ವಿಚಾರವಂತನಾದಂದಿನಿಂದಲೇ ಆಯಾ ಕಾಲಕ್ಕೆ, ದೇಶ, ಭಾಷೆ, ಜನಾಂಗಕ್ಕೆ, ಪರಿಸ್ಥಿತಿಗೆ ಹೊಂದಿಕೊಂಡಂತೆ ಹುಟ್ಟಿಕೊಂಡಿವೆ. "ಗಾದೆ ಲೆಕ್ಕ ಇಟ್ಕೋಬ್ಯಾರು, ಕೌದಿ ತೂತ್ನ ಎಣಿಸ್ಕೋಬ್ಯಾರು?" ಎಂದು ಅನುಭವಿಗಳು ಅಲಂಕಾರಿಕವಾಗಿ ಹೇಳಿದ್ದಾರೆ. ಜನಸಾಮಾನ್ಯರ ನೈಜ ಅನುಭವದ ಹೃದಯ ಸಾಗರದಲ್ಲಿ ಅದೆಷ್ಟು ಗಾದೆ-ಮುತ್ತುಗಳು ಇವೆಯೋ !

ಗ್ರಾಮೀಣ ಬದುಕಿನ, ಮಣ್ಣಿನ ಮಕ್ಕಳ, ನೇಗಿಲ ಯೋಗಿಯ, ಜೀವನಾಡಿಯಾಗಿರುವ ಬೇಸಾಯ ಹಾಗೂ ಒಕ್ಕಲು ಮಕ್ಕಳು ಆಶ್ರಯಿಸಿದ ಮಳೆ-ಇವುಗಳನ್ನು ಕುರಿತು ಲೆಕ್ಕವಿಲ್ಲದಷ್ಟು ಗಾದೆಗಳಿವೆ. "ಮಳೆಯಿಂದ ಇಳೆ, ಇಳೆಯಿಂದ ಬೆಳೆ, ಬೆಳೆಯಿಂದ ಬದುಕು." ಇದ ನಂಬಿದ ಒಕ್ಕಲಿಗನ ಹೆಮ್ಮರದ ಮನದಲ್ಲಿ ಲೆಕ್ಕವಿಲ್ಲದಷ್ಟು ಕೊಂಬೆಗಳು. ಕೆಲವು ನೇರ; ಕೆಲವು ಅಂಕುಡೊಂಕು – ರೋಗರುಜಿನ ತಾಳಿದರೂ ಅವುಗಳ ನಡುವಿಂದ ಹೊಮ್ಮಿದ ಗಾದೆಗಳೆಂಬ ಅನುಭವದ ಹೂವುಗಳು ಕಾಯಾಗಿ, ಹಣ್ಣಾಗಿ ರುಚಿ ಬೀರಿವೆ.

"ಎರೆ ಇದ್ದೋನು ದೊರೆ" (ಎರೆ=ಎರೆ ಮಣ್ಣಿನ ಹೊಲ, ಎರೆ ಭೂಮಿ.) "ಎರೆ ಹೊಲಾನ ನೊರೆಗ್ಯೆದರೆ ಹರೇದ ಹುಡ್ಗೀನ ಹದಕ್ಕೆ ತಂದ್ಹಂಗೆ" ಎಂಬ ಮಾರ್ಮಿಕ ನುಡಿ ಗಾದೆಯಾಗಿದೆ ! "ದುಡಿಯೋ ಮಗ ದಣೀ ಬಾರ್ದು. ಎಳೆಯೋ ಎತ್ತು ಸೋಲ್ಬಾರ್ದು" ಆದರೂ ರೈತನ ಬದುಕು "ಬಾಳೆಯಂತೆ ಬಾಳು, ತೆಂಗಿನಂತೆ ಬೆಳೆ" (ಕ್ಷಣಿಕವಾದರೂ ಫಲಪ್ರದ, ಉಪಕಾರಿ) ಎಂದು ಸಾರುತ್ತವೆ ಈ ಗಾದೆಗಳು !

ಜನಪದರ ಈ ಗಾದೆಗಳಲ್ಲಿ ಮಳೆ ಮತ್ತು ಒಕ್ಕಲುತನದ ಬದುಕಿನ ಹಾಸು-ಹೊಕ್ಕು ಅನನ್ಯವಾಗಿ ಬಿಂಬಿತವಾಗಿದೆ. "ಹರಿಶ್ಚಂದ್ರನಂತೆ ಗಾಳಿಗೆ ನೊರೆ ಸುತ್ತೋ ಮಳೆ ಸುರೀಬೇಕು, ರೈತನ ಬಡತನ ನೀಗಬೇಕು." "ನೊರೆ ಸುತ್ತೋ ಮಳೆ ಹುಯ್ದರೆ ನಮ್ಮ ಹಗೇವ್ದಾಗ ನಮ್ಮ ಜ್ವಾಳ ಇದ್ದಾಂಗ"

"ಭರ್ಣಿ ಮಳೆ ಸುರಿದ್ರೆ ಬರಗಾಲದ ಭಯ ವಿಲ್ಲ" "ಭರಣಿ ಸುರಿದ್ವರ್ಷ ತೆಗ್ಗಿನ ಗದ್ದೆ ತೇರ್ಸ್ಕಟ್ತು" ಎಂದು ಹೇಳುವ ರೈತ "ಭರಣಿ ಬಾರ್ಸಿದ್ರೆ ಭತ್ತ ಪಣತದಾಗೆ" ಎಂಬ ನಂಬಿಕೆ ಹೊಂದಿದ್ದಾನೆ

"ಮೃಗಶಿರ ಮಳೆಗೆ ಮಿಕ್ಕುಜೋಳ, ಕೃತಿಕೆ ಮಳೆಗೆ ಕುತ್ತಿಗೆ ಉದ್ದ ಜೋಳ, ಇಬ್ಬನಿಗೆ ಬೆಳೀತು ಹಿಬ್ಗರಿ ಜೋಳ" ಎನ್ನುತ್ತಾರೆ. ಆಕಾಶದಲ್ಲಿ ಮಳೆ ಬರುವ ಚರ್ಯೆಗಳನ್ನು ಗುರುತಿಸಿದ್ದಾರೆ. "ಜಲ್ರೇಖೆ ಮೂಡಿದ್ರೆ ತೇಲಾಡೋ ಮಳೆ, ನೀಲ್ಗದರಿ ಮೂಡಿದ್ರೆ ಕೆರೆ ತುಂಬೋ ಮಳೆ, ಸೂರ್ಯ-ಚಂದ್ರ ಗೂಡು ಕಟ್ಟಿದ್ರೆ (ಕ್ವಾಟೆ ಕಟ್ಟಿದ್ರೆ) ಹೇಳ್ದಂಗೆ ಎಂಟು ದಿವ್ಸಕ್ಕೆ ಮಳೆ" ಎಂಬ ನಂಬಿಕೆಯಿಂದ, ಎಲ್ಲಾ ಭಾರ ದೇವರ ಮೇಲ್ಹಾಕಿ "ಸತ್ಯದ ಮಳೆ ಎಲ್ಲಿಂದಾದ್ರು ಬರ್ತದೆ" ಎನ್ನುತ್ತಾರೆ.

ರೋಹಿಣಿ ಮಳೆಯ ಬಗ್ಗೆ ಎಲ್ಲಿಲ್ಲದ ನಂಬಿಕೆ. "ರೋಣಿ ಮಳೆ ಹುಯ್ದ್ರೆ ಓಣಿಲ್ಲಾ ಕೆಸರು," "ರೋಣಿ ಸುರುದ್ರೆ ಓಣಿಗೆಲ್ಲಾ ಕಾಳು" "ರೋಣಿ ಬಂದ್ರೆ ರೋಣಗಲ್ಲಿಗೆ ಬಿಡುವಿಲ್ಲ" ಎಂಬಂತೆ ಬೆಳೆ ಬೆಳೆಯುತ್ತದಂತೆ. "ಮುಂಗಾರು ಮುಂಗಂಡಾದ್ರೆ-ಹೊಟ್ಟೆ ಚಿಂತೆ ತಪ್ತು" ಅಕಸ್ಮಾತ್ ಮುಂಗಾರು ಎಡವಟ್ಟಾದರೂ, "ಅದ್ರಿ ಮಳೆ ಬಿತ್ತೊ,-ಅದ್ರಿ ಮಳೆಗೆ ಅರಷ್ಟು ಬಿತ್ತೊ" "ಅದ್ರಿ ಮಳೆಗೆ ಬಿತ್ತಿದ್ರೆ ಅಡ್ಕಾಳು ಹೆಚ್ಚು." "ಅದ್ರಿ ಎರೆಹೊಲಾನ ಸೂರೆಗ್ಯೆಯ್ದ್ಲ". ಈ ಮಳೆ ಬಗ್ಗೆ ಅಪನಂಬಿಕೆಯೂ ಇದೆ! "ಅದ್ರಿ ಗುಡುಗಿದ್ರೆ ಮುಂದಿನ ಆರ್ಕ್ಳೆಗೆ ಹೊತ್ತ" ಎನ್ನುತ್ತಾರೆ.

ಮಳೆಗಳ ಫಲಾಫಲಗಳು ಅವುಗಳು ಏರಿ ಬರುವ ವಾಹನವನ್ನೂ ಅವಲಂಬಿಸಿವೆ. "ನರಿವಾನ ಬರ್ಲಿಲ್ಲ. ಕಪ್ಪೆವಾನ ತಪ್ಲಿಲ್ಲ," "ಎಮ್ಮೆವಾನದ ಮಳೆ ಧಮ್ಮುಗಟ್ಟಿ ಸುರೀತು." "ಕತ್ತೆವಾನ ನೆಲ ಕಚ್ಕೊಂಗೆ ಬಾರಿಸ್ತು" ಎಂದರೆ, "ಸುನ್ನೀವ್ದಾಗೆ ಮಳೆ ಉದ್ರಿದ್ರೆ ಮುಂಗಾರು ಒದ್ಕಂಡ್ಹಂಗೆ," "ಸುನ್ನೀವ್ದಾ ನೋಡ ಬೀಜ ಗಟ್ಟಿದ್ರೆ ಬಿತ್ತೋ ಬೀಜ ಬಸ್ರಾದ್ಹಂಗೆ" ಎಂಬ ನಂಬಿಕೆಗಳಿವೆ.

"ಅಸ್ಲೆ ಮಳೆಗೆ ಹೊಲೆಲ್ಲಾ ಹಸುರ್ಗಟ್ಟಿದ್ದು." (ಅಸ್ಲೆ=ಆಶ್ಲೇಷಾ ಮಳೆ) "ಅಸ್ಲೆ ಮಳೆಗೆ ಹಂಚ ಮೇಲೆಲ್ಲಾ ಹುಲ್ಲು" ಬೆಳೆಯೋ ಹಾಗೆ ಮಳೆ ಬಾರ್ಸಿದ್ರೆ, "ಉಬ್ಬೆ ಮಳೆಗೆ ಗುಬ್ಬಿ ಗೂಡು ನೆನೆದ್ವು" "ಉಬ್ಬೆ ಮಳೆ ಉಬ್ಬುಬ್ಬಿ ಬಾರುಸ್ತು" "ಉಬ್ಬೆ ಮಳೆಗೆ ಉಬ್ಬು ತಗ್ಗು ಸಮ." ಈ ಸಮಯದಲ್ಲಿ ಸ್ವಲ್ಪ ಬಿಸಿಲು ಬಯಸುವ ರೈತರಿಗೆ "ಬಂದರೆ ಮಗೆ ಹೋದರೆ ಹೊಗೆ" ಎಂಬ ಮಾತು ಮಘಾ ಮಳೆಯ ಬಗ್ಗೆ.

ಉತ್ತರನ ಪೌರುಷ ಒಲೆ ಮುಂದೆ; ಹಾಗೇ ಉತ್ತರಾ ಮಳೆ: ಉತ್ರಿ ಮಳೆ ಸುತ್ತಗಟ್ಟಿ ಸುರೀತು." ನಂತರ ಹಸ್ತಾ-ಚಿತ್ತಾ ಮಳೆಗಳು. "ಹೋದರೆ ಅತ್ತಾ ಬಂದರೆ ಚಿತ್ತಾ" "ಅತ್ತದ ಮಳೆ ತಪ್ಪದೇ ಬಂತು." "ಚಿತ್ತ ಮಳೆ ಬಿಸಿಲ್ಗೆ ಹೇಳ್ಸಿದ್ದು." ಇದಾದ ಮೇಲೆ ಬರೋ "ಸ್ವಾತಿ ಮಳೆ ಮುಂದೆ ಇನ್ಯಾತರ ಮಳೆ!" "ಚಿತ್ತ ಸ್ವಾತಿ ಆದ್ರೆ ಹಿಂಗಾರು ಬೆಳೆ ಬಂಗಾರ್ದಂಗೆ," ಆಗ ಒಕ್ಕಲಿಗ ಹರ್ಷದಿಂದ ವರ್ಷದ ಫಸಲು ಕಂಡು, "ಅತ್ತದ ಮಳೆ ಬಂದು ಚಿತ್ತ ಬಿಸಿಲು ಕಾದ್ರೆ, ಒಕ್ಕಲ ಮಗ ಎತ್ತು ಕೊಟ್ಟು ಎಮ್ಮೆ ತಂದಾ" ಎನ್ನುತ್ತಾರೆ.

ಮಳೆಯ ರಭಸ ಚೆನ್ನಾಗಿರಬೇಕು. "ಕುಟುಕುಟೂಂತ ಮಳೆ ಹಿಡೀಬಾರ್ದು, ವಟವಟಾನ್ನೋ ಹೆಂಡ್ತಿ ಇರ್ಬಾರ್ದು." "ಮಲ್ನಾಡ್ನಾಗೆ ಮಳೆ ಹುಯ್ದರೆ ಬಯಲ್ಸೀಮೆಗೆ ಹೊಳೆ ಬಂತು" "ಕರ್ಮದ ಊರ ಮುಂದೆ ಧರ್ಮದ ಹೊಳೆ ಹರಿತು." "ಮಳೆ ಬಂದಾಗ ಕಂಬ್ಳಿಗ್ಯಾನ ಮಾಮೂರಿ ತಂಡಿ ಬಿದ್ರೆ ಮೊಳದುದ್ದ ಅವರೆ ಗೊನೆ"

ಹೀಗೆ ರೈತರ ಜೀವ ಮಳೆಯಾದರೆ, ಗಾದೆಗಳು ಬದುಕಿನ ಅನುಭವಗಳ ದೀವಿಗೆಯಾಗಿ, ರೈತನ ಬದುಕಿನಲ್ಲಿ ಹಾಸು ಹೊಕ್ಕಾಗಿ, ಚಿರಂತನ, ಚಿರನೂತನವಾಗಿವೆ. ಇವು ಕಣ್ಮರೆ-ಮಣ್ಮರೆಯಾಗುವ ಮುನ್ನ ಹೆಕ್ಕಿ ಒಪ್ಪ ಮಾಡಬೇಕಾಗಿದೆ.

(ಹೇಳಿದವರು: ನನ್ನ ತಾಯಿ ಸಿಂಗಮ್ಮ)

● ದಂದೂರು ರಾಜಣ್ಣ,
ಶೃಂಗೇರಿ.

'ಮಾಮ್‌ಕೋಸ್' ಪ್ರೋತ್ಸಾಹ ಧನ

ಶಿವಮೊಗ್ಗದ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘವು ತನ್ನ ಬೆಳ್ಳಿ ಹಬ್ಬದ ಸ್ಮರಣಾರ್ಥ ಪ್ರತಿ ವರ್ಷದಂತೆ ಈ ವರ್ಷವೂ ಸಹ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಕೊಟ್ಟು ಪುರಸ್ಕರಿಸಲಿದೆ.

ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುವ ಸಂಘದ ಸದಸ್ಯರ ಮಕ್ಕಳಲ್ಲಿ ಹೆಚ್ಚು ಅಂಕಗಳನ್ನು ಗಳಿಸಿ, ಎಸ್. ಎಸ್. ಎಲ್. ಸಿ. ಮತ್ತು ಅಂತಿಮ ಪಿ.ಯು.ಸಿ. ಯಲ್ಲಿ ಉತ್ತೀರ್ಣರಾದವರಿಗೆ ಈ ಪ್ರೋತ್ಸಾಹ ಧನ ದೊರೆಯಲಿದೆ.

ಅರ್ಹ ವಿದ್ಯಾರ್ಥಿಗಳು ದಿನಾಂಕ. 16-7-1990ರ ಒಳಗಾಗಿ, ಪಾಸಾದ ಪರೀಕ್ಷೆ, ಸರ್ಟಿಫೈಡ್ ಮಾರ್ಕ್ಸ್‌ಕಾರ್ಡ್, ತಮ್ಮ ಹೆಸರು, ತಂದೆಯ ಹೆಸರು, ಅವರು ಸಂಘದಲ್ಲಿದ್ದ ಸದಸ್ಯತ್ವದ ನಂಬರುಗಳ ಮಾಹಿತಿಯನ್ನು ಅರ್ಜಿಯಲ್ಲಿ ಕಾಣಿಸಿ, ಸಂಘದ ಕಾರ್ಯದರ್ಶಿಯವರಿಗೆ ಅರ್ಜಿ ಕಳಿಸಬೇಕು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುವವರಿಗೆ ಅಂತಿಮ ಪಿ ಯು.ಸಿ ಮತ್ತು ಎಸ್ ಎಸ್ ಎಲ್.ಸಿ., ಗೆ ತಲಾ ಒಂದೊಂದು ಪ್ರೋತ್ಸಾಹದ ಬಹುಮಾನಗಳು ದೊರೆಯಲಿವೆ.

ನೆರೆ ಸಂತ್ರಸ್ತ ರೈತರಿಗೆ ಉಚಿತ ಕೃಷಿ ಉಪಕರಣ

ಶೃಂಗೇರಿ : 1989-90ನೇ ಸಾಲಿನಲ್ಲಿ ನೆರೆ ಹಾವಳಿಯಿಂದ ಸಂತ್ರಸ್ತರಾಗಿದ್ದ ಭತ್ತದ ಬೆಳೆಗಾರರಿಗೆ ತಲಾ 345 ರೂ. ಬೆಲೆಯ ಕೃಷಿ ಉಪಕರಣಗಳನ್ನು ವಿತರಿಸುವ ಕಾರ್ಯಕ್ರಮ ಈಚೆಗೆ ಇಲ್ಲಿ ಕೆ. ವಿ. ರಾಮಪ್ಪಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಚಿಕ್ಕಮಗಳೂರಿನ ಪ್ರಧಾನ ಕೃಷಿ ಅಧಿಕಾರಿ ಸುಬ್ಬಪ್ಪ ಗೌಡ ತಹಸೀಲ್ದಾರ್ ಟಿ. ಬೋರೇ ಗೌಡ ಮತ್ತು ಬಿಡಿಓ ನಾಗಲಿಂಗಯ್ಯ ಮುಖ್ಯ ಅತಿಥಿಗಳಾಗಿದ್ದರು.

ಮಹೇಶ ಗೌಡ ಭತ್ತದ ಬೆಳೆ ಕುರಿತು ಮಾಹಿತಿ ನೀಡಿದರು. ಸ ಕೃ. ನಿರ್ದೇಶಕ ಚಂದ್ರಶೇಖರಯ್ಯ ಸ್ವಾಗತಿಸಿ, ಮುನಿಸ್ವಾಮಿ ವಂದಿಸಿದರು.

ಪದ್ಯದಂಗಳ

ಪ್ರಕೃತಿ

ಅರುಣ – ವರುಣರ ಅನು-
ರಾಗದಲಿ ಮುಸುಳಿ ನಭ
ಸೇರಿದ ಬಿಂದು ತಂಪಾಗಿ
ಸುರಿದಾಗ ಆರ್ದ್ರವಾದಳು ಪ್ರಕೃತಿ

ಹಸಿರಿನ ಚಿಗುರು ಓಲಾಡಿ
ಹೂವಿನ ಪನ್ನೀರು ಸುರಿದು
ಒಡಲೆಲ್ಲ ಕಂಪ ಸೂಸಿ
ತೂಗಿ ತೊನೆದಳು ಪ್ರಕೃತಿ

ನರರ ಪ್ರೀತಿ-ದ್ವೇಷದ ಬೆರಕೆಯಲಿ
ಒಮ್ಮೊಮ್ಮೆ ಅನಿರ್ವಚನೀಯ
ಆನಂದದ ಅಲೆಯುಕ್ಕಿದಾಗ
ಅಮೃತವ ಸಿಂಚಿಸಿದಳು ಪ್ರಕೃತಿ

ಹಸಿರ ಮೇಲಿನ ಹನಿ
ಅಪರಿಮಿತ ಚೆಲುವಿನ ಖನಿ,
ದ್ಯುತಿ ಹೀರುವ ಮುನ್ನ
ಪ್ರತಿಫಲಿಸಿದ ತನ್ನ
ಚೆಲುವಿಗೆ ನಸು ನಾಚಿದಳು ಪ್ರಕೃತಿ.

—'ನಾಸು' ಶೃಂಗೇರಿ,

ಎರಡು ಹಂತ

ಅಧ್ಯಾಪಕ
ವೃತ್ತಿಯಲಿ
ಎರಡು ಹಂತ
ಅರ್ಧ ವಿಶ್ರಾಂತಿ
ಪೂರ್ಣ ವೇತನ
ಪೂರ್ಣ ವಿಶ್ರಾಂತಿ
ಅರ್ಧ ವೇತನ

—ಡಿ. ಬಿ. ರಾಮಚಂದ್ರಾಚಾರ್
(ಸೌಜನ್ಯ : 'ಗಾಂಧಿ ಬಜಾರ್')

ಮುಂಜಾನೆ

ಬಾನಿನ ಮಡಿಲಲ್ಲಿ ಮುಂಜಾನೆ ತೆರೆಯ
ನವ ರೂಪ ಮೂಡಿತು ಇಳೆಯಲ್ಲಿ
ನವ ಚೈತನ್ಯ ಬೀರಿತು ನರನಲ್ಲಿ

—ರೋಕಿ ಅಶೋಕ್ 'ಡಿ'ಸೋಜ
ಜಯಪುರ.

ಹಾಸ್ಯ ಧಡಾಕಿಗಳು

ಸಂಗ್ರಹ : ಎಚ್. ವಿ. ನರಸಿಂಹ ಮೂ

ಮರೆಗುಳಿ ಪ್ರೊಫೆಸರ್

ಅಲ್ಲಾ ಸಾರ್, ನಿಮ್ಮ ಕಿವಿ ಹ ಸುಟ್ಟು ಹೋಯಿತು?

ಪ್ರೊ! : ನಾನು ಬಟ್ಟೆಗೆ ಇಸ್ತ್ರಿ ಮಾ ವಾಗ ಫೋನ್ ಬಂತು. ಕಿವಿಗೆ ರಿಸೀ ಬದಲು....

ಆತ : ಸರಿ ಸಾರ್, ಮತ್ತೊಂದು ಯೂ ಸುಟ್ಟುಹೋಗಿದೆಯಲ್ಲ?

ಪ್ರೊ!: ಒಂದು ಕಡೆ ಕೇಳಿಸ್ಲಿಲ್ವಲ್ಲ ಮತ್ತೊಂದು ಕಿವಿಗೆ ಇಟ್ಟು ನೋಡಿದೆ...

....

ಮನೆಗೆ ಬಂದ ಪ್ರೊ|| ರಾಯರು ಮ ಯನ್ನು ಕುರಿತು, "ಅಲ್ಲವೇ, ಈ ದಿನ ಛತ್ರಿ ಕಳೆದುಹೋಯಿತು...."

ಹೆಂ : ಹೌದಾ ? ಎಲ್ಲಿ ಕಳಕೊಂ ಹೇಗೆ ಕಳಕೊಂಡಿರಿ?

ರಾ : ಎಲ್ಲಿ-ಹೇಗೆ ಎಂಬುದು ಸರಿಯ ಗೊತ್ತಿಲ್ಲ. ಮಳೆ ನಿಂತ ಮೇಲೆ ಮಡಿಸಬೇಕು ಅಂತ ನೋಡುತ್ತೀನಿ, ಇಲ್ಲ !

ಕೊಪ್ಪ ಆಸ್ಪತ್ರೆ: ಇರುವ ಸೌಕರ್ಯಗಳೂ ಸದುಪಯೋಗವಾಗದಿರಲು ಸಾರ್ವಜನಿಕರ ಅನಾಗರಿಕ ವರ್ತನೆಯೇ ಕಾರಣ

ಪ್ರಿಯರೆ,

ದಿನಾಂಕ: 27-5-1990 ರ 'ಮುಂಜಾವು' ಪತ್ರಿಕೆಯಲ್ಲಿ ವಸಂತ ಕುಮಾರ್ ಹರ್ಡೀಕರ್ ಮತ್ತು ಇತರರು ಕೊಪ್ಪ ಸಾರ್ವಜನಿಕ ಆಸ್ಪತ್ರೆಯ ಕುಂದು ಕೊರತೆಗಳ ಬಗ್ಗೆ ಬರೆದಿರುವುದನ್ನು ಗಮನಿಸಲಾಗಿದೆ. ಇದಕ್ಕೆ ಈ ಕೆಳಕಂಡಂತೆ ವಿವರಣೆ ನೀಡಲು ಬಯಸುತ್ತೇನೆ

ಕೊಪ್ಪ ಸಾರ್ವಜನಿಕ ಆಸ್ಪತ್ರೆಯ ಹಳೆಯ ಕಟ್ಟಡದ ನಿರ್ಮಾಣದಲ್ಲಿನ ನ್ಯೂನತೆಗಳು ಹಾಗೂ ಪರಿಹಾರೋಪಾಯಗಳ

ಓದುಗರ ಪುಟ

ಬಗ್ಗೆ ಈ ಹಿಂದೆ ತಾವು ಪುರಸಭಾ ಸದಸ್ಯರೊಂದಿಗೆ ಭೇಟಿ ನೀಡಿದ್ದಾಗ ವಿವರವಾಗಿ ತಿಳಿಸಿದ್ದನ್ನು ಇಲ್ಲಿ ಸ್ಮರಿಸುತ್ತೇನೆ.

ಕೊಪ್ಪ ಸಾರ್ವಜನಿಕ ಆಸ್ಪತ್ರೆಗೆ 30 ಹಾಸಿಗೆಗಳು ಮಾತ್ರ ಮಂಜೂರಾಗಿದ್ದು, ಪ್ರತಿ ದಿನ ಕನಿಷ್ಠ 40 ರಿಂದ 45 ಒಳ ರೋಗಿಗಳು, ಚಿಕಿತ್ಸೆ ಪಡೆಯುತ್ತಾರೆ. ಹಾಗೂ ಪ್ರತಿ ಒಳ ರೋಗಿಗೆ ಕನಿಷ್ಠ 2 ಜನ ಸಹಾಯಕ ಬಂಧುಗಳು ಇರುತ್ತಾರೆ. ಇವರೆಲ್ಲರೂ, 30 ರೋಗಿಗಳು ಪಡೆಯಬಹುದಾದ ಸೌಲಭ್ಯಗಳನ್ನೇ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಈ ಆಸ್ಪತ್ರೆಗೆ ಒಟ್ಟು 17 ಜನ ಗ್ರೂಪ್ 'ಡಿ' ನೌಕರರ ಹುದ್ದೆಗಳ ಮಂಜೂರಾತಿ ಇದ್ದು. ಹಾಲಿ 12 ಜನರು ಮಾತ್ರ ಕಾರ್ಯ ನಿರ್ವಹಿಸುತ್ತಿರುವುದರಿಂದ ಸಿಬ್ಬಂದಿ ಕೊರತೆಯೂ ಅಧಿಕವಾಗಿದೆ

ಕೊಪ್ಪ ಮಧ್ಯಾಂತರ ಮಂಡಲ ಪಂಚಾಯ್ತಿಯವರು ಎರಡು ದಿನಗಳಿಗೊಮ್ಮೆ ಮಾತ್ರ ನೀರು ಸರಬರಾಜು ಮಾಡುತ್ತಿದ್ದು, ಈ ಎರಡು ದಿನಗಳಿಗೆ ಸಾಕಾಗುವಷ್ಟು ನೀರನ್ನು ಕಟ್ಟಡದ ಮೇಲ್ಭಾಗದ ತೊಟ್ಟಿಯಲ್ಲಿ ಸಂಗ್ರಹಿಸುವ ಸಾಮರ್ಥ್ಯವಿಲ್ಲದಿರುವುದರಿಂದ ಎಲ್ಲಾ ವಾರ್ಡುಗಳಿಗೂ ದಿನ ಪೂರ್ತಿ ನೀರು ಸರಬರಾಜು ಆಗುತ್ತಿಲ್ಲ. ಕಟ್ಟಡದ ಮೇಲ್ಭಾಗದ ತೊಟ್ಟಿಯಲ್ಲಿ ನೀರು ಇಲ್ಲದಿರುವಾಗ ರೋಗಿಗಳು ಹಾಗೂ ಅವರ ಸಹಾಯಕರು ಅನಿವಾರ್ಯವಾಗಿ ನೆಲ ಮಟ್ಟದ ತೊಟ್ಟಿಯನ್ನೇ ಆಶ್ರಯಿಸಬೇಕಾಗುತ್ತದೆ. ಆದರೆ ಬಹುಪಾಲು ರೋಗಿಗಳು ಗ್ರಾಮಾಂತರ ಪ್ರದೇಶದಿಂದ ಬರುವವರಾಗಿರುವುದರಿಂದ, ಆಸ್ಪತ್ರೆಯ ನೈರ್ಮಲ್ಯದ ಬಗ್ಗೆ ತಮ್ಮಗಳ ಕನಿಷ್ಠ ಜವಾಬ್ದಾರಿಯನ್ನೂ ಅರಿತಿರುವುದಿಲ್ಲ ಇವರುಗಳಿಗೆ ಎಷ್ಟೇ ತಿಳುವಳಿಕೆ ಹೇಳಿದರೂ ಸಹ ಆಸ್ಪತ್ರೆಯ ಸಿಬ್ಬಂದಿ ವರ್ಗದವರೊಂದಿಗೆ ಸಹಕರಿಸುವುದಿಲ್ಲ. ರೋಗಿಗಳ ರಕ್ತಸಿಕ್ತ ಬಟ್ಟೆಗಳು ಮತ್ತು ಬೇಡದ ವಸ್ತುಗಳನ್ನು ಹಾಕಲು ಕಸದ ತೊಟ್ಟಿಗಳನ್ನು ಇಟ್ಟಿದ್ದರೂ, ಅವುಗಳಲ್ಲಿ ಹಾಕದೇ ಅನಾಗರಿಕವಾಗಿ ಶೌಚ ಗೃಹಗಳಲ್ಲೋ, ಅಥವಾ ಎಲ್ಲೆಂದರಲ್ಲಿ ಎಸೆಯುವುದು ಸರ್ವೇಸಾಮಾನ್ಯವಾಗಿದೆ.

ಆಸ್ಪತ್ರೆಯಲ್ಲಿ ದೊರೆಯುವ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಬಳಸುವ ಜ್ಞಾನದ ಕೊರತೆಯೇ ಶ್ರೀ ವಸಂತ ಕುಮಾರ್ ಮತ್ತು ಇತರರು ತಿಳಿಸಿರುವ ನ್ಯೂನತೆಗೆ ಕಾರಣವಾಗಿರಬಹುದೇ ಹೊರತು ಇದು ಅಸಹಾಯಕತೆಯ ವೈಫಲ್ಯವಲ್ಲ. ಸಾರ್ವಜನಿಕರಲ್ಲಿ ಎಲ್ಲಿಯವರೆಗೆ ಆಸ್ಪತ್ರೆಯ ನೈರ್ಮಲ್ಯವನ್ನು ತಮ್ಮ ಮನೆಯಂತೆ ರಕ್ಷಿಸಬೇಕೆಂಬ ಭಾವನೆ ಬರುವುದಿಲ್ಲವೋ, ಅಲ್ಲಿಯವರೆಗೆ ಈ ನ್ಯೂನತೆಗಳ ಸಂಪೂರ್ಣ ನಿವಾರಣೆ ಅಸಾಧ್ಯ.

ಆಸ್ಪತ್ರೆಯ ಹಳೆಯ ಕಟ್ಟಡದ ನಿರ್ಮಾಣದ ಸಮಯದಲ್ಲಿ, ಶೌಚ ಗೃಹಗಳಿಗೆ ಅಳವಡಿಸಿರುವ ಪೈಪುಗಳನ್ನು ತಾಂತ್ರಿಕವಾಗಿ ಸರಿಯಾದ ರೀತಿ ಅಳವಡಿಸದೆ ಇರುವುದರಿಂದ ಶೌಚ ಗೃಹಗಳು ಆಗಾಗ್ಗೆ ಕಟ್ಟಿಕೊಳ್ಳುವುದು ಸಾಮಾನ್ಯವಾಗಿದೆ. ಹಾಲಿ ಇರುವ ಶೌಚ ಗೃಹಗಳ ಪೈಪ್ ಲೈನನ್ನು ಸಂಪೂರ್ಣ ತೆಗೆದು ಹೊಸದಾಗಿ ಹೆಚ್ಚು ವ್ಯಾಸವುಳ್ಳ ಪೈಪ್‌ಗಳನ್ನು ತಾಂತ್ರಿಕವಾಗಿ ಅಳವಡಿಸಿದಲ್ಲಿ ಮಾತ್ರ ಈ ಸಮಸ್ಯೆ ನಿವಾರಿಸಬಹುದು. ಆದರೆ ಈ ಪರಿವರ್ತನೆಯನ್ನು ಜಿಲ್ಲಾ ಪರಿಷತ್ ವತಿಯಿಂದ ಅಥವಾ ಸಾರ್ವಜನಿಕರ ಸಹಕಾರದಿಂದ ಮಾತ್ರವೇ ಮಾಡಿಸಬಹುದೇ ವಿನಃ ಈ ಬಗ್ಗೆ ನಾವು ನಿಸ್ಸಹಾಯಕರು.

(4ನೇ ಪುಟಕ್ಕೆ)

ಖ್ಯಾತ ಭಾಗವತ ಕಾಳಿಂಗ ನಾವಡ ಇನ್ನಿಲ್ಲ

ಮೇ 26 ನೇ ತಾರೀಕು ಭಾನುವಾರ ರಸ್ತೆ ಅಪಘಾತವೊಂದರಲ್ಲಿ ನಿಧನರಾದ ಹೆಸರಾಂತ ಯಕ್ಷಗಾನ ಭಾಗವತ ಕಾಳಿಂಗ ನಾವಡರು ಯಕ್ಷಗಾನ ಭಾಗವತಿಕೆಯಲ್ಲಿ ಪೂರ್ಣಸಿದ್ಧಿಯನ್ನೂ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲೆನಾಡು ಪ್ರದೇಶಗಳಲ್ಲಿ ಅಪೂರ್ವ ಪ್ರಸಿದ್ಧಿಯನ್ನೂ ಹೊಂದಿದ್ದರು. ಯಕ್ಷಗಾನ ಪ್ರೇಮಿಗಳು ಇವರಿಗೆ 'ರಸರಾಗ ಚಕ್ರವರ್ತಿ' ಎಂಬ ಬಿರುದನ್ನಿತ್ತಿದ್ದರು. ಕೇವಲ 33 ವರ್ಷದವರಾಗಿದ್ದ ಅವರು, ಅತ್ಯಂತ ಕಿರಿಯ ಅಂದರೆ ತಮ್ಮ 13ನೇ ವಯಸ್ಸಿನಲ್ಲಿಯೇ ಯಕ್ಷಗಾನ ರಂಗ ಪ್ರವೇಶಿಸಿದ್ದರು. ರಾಜ್ಯ ಪ್ರಶಸ್ತಿವಿಜೇತ ಭಾಗವತರಾದ ನಾರಾಯಣ ಉಪ್ಪೂರರ ಹತ್ತಿರ ಸುಮಾರು ಐದು ವರ್ಷಗಳ ಕಾಲ ಅಮೃತೇಶ್ವರಿ ಮೇಳದಲ್ಲಿ ಸಂಗೀತಗಾರರಾಗಿ ವೃತ್ತಿ ಆರಂಭಿಸಿದ ಇವರು ನಂತರ ಪೆರ್ಡೂರು ಮೇಳದಲ್ಲಿ ಒಂದು ವರ್ಷ ಭಾಗವತರಾಗಿ ಅನಂತರ ಸಾಲಿಗ್ರಾಮ ಮೇಳದಲ್ಲಿ ಭಾಗವತರಾಗಿದ್ದರು

ಶ್ರೀಯುತರು ಯಕ್ಷಗಾನ ಆಖ್ಯಾನಗಳನ್ನು ಕೂಡ ರಚಿಸಿದ್ದರು. ಅವುಗಳಲ್ಲಿ ಅವರಿಗೆ ಪ್ರಸಿದ್ಧಿಯನ್ನು ತಂದು ಕೊಟ್ಟದ್ದೆಂದರೆ 'ನಾಗ ಶ್ರೀ' ಯಕ್ಷಗಾನದ ಹಾಡುಗಾರಿಕೆಗೆ ಹೊಸ ಆಯಾಮ ನೀಡಿ ಇಂದಿನ ಯುವ ಪೀಳಿಗೆಯನ್ನು ತಮ್ಮತ್ತ ಆಕರ್ಷಿಸುವುದರಲ್ಲಿ ಯಶಸ್ವಿಯಾಗಿದ್ದ ನಾವಡರು ಬೊಂಬಾಯಿ, ದೆಹಲಿ ಮುಂತಾದ ಕಡೆಗಳಲ್ಲಿಯೂ ಕೂಡ ಸಹಸ್ರಾರು ಪ್ರದರ್ಶನ ನೀಡಿದ್ದರು.

ಶ್ರೀಯುತರ ಅಕಾಲಿಕ ಮರಣ ಯಕ್ಷಗಾನ ರಂಗಕ್ಕೆ ತುಂಬಲಾರದ ನಷ್ಟ.

ಎಚ್. ಎಸ್. ಸತ್ಯನಾರಾಯಣ,
ಹಾಲ್ಮುತ್ತೂರು

ಅವ್ಯವಸ್ಥೆಯ ಆಗರ ಜಯಪುರ

ಪ್ರಿಯರೆ,

ಜಯಪುರ ಬಸ್ ನಿಲ್ದಾಣಕ್ಕೆ ಅನುದಾನವಾದ ಹಣವು ಸದರಿ ಮಂಡಲ ಪ್ರಧಾನರ ಹಾಗೂ ಕಂಟ್ರಾಕ್ಟ್‌ದಾರರ ನಿರ್ಲಕ್ಷ್ಯದಿಂದ ಸೋರಿ ಹೋಗಿದೆ. ಇಲ್ಲಿ ಒಮ್ಮೆ ಬಸ್ ಸ್ಟ್ಯಾಂಡ್ ನಿರ್ಮಿಸಿ ಅನಂತರ ಅದನ್ನು ವಿಶಾಲಗೊಳಿಸಲಾಯಿತು. ಶೌಚಾಲಯವನ್ನು ಎರಡು ಬಾರಿ ನಿರ್ಮಿಸಲಾಯಿತು. ಈಗ ಹರಾಜಾಗಿರುವ ಅಂಗಡಿ ಮಳಿಗೆಗಳು ಗೋಡೋನ್‌ನಂತಿವೆ. ಅವುಗಳಿಗೆ ವಿಶಾಲವಾದ ಕಿಟಕಿಗಳನ್ನು ನೀಡಿಲ್ಲ.

ಆ ಮಳಿಗೆಗಳ ಭದ್ರತೆಗಾಗಿ ಪಕ್ಕದಲ್ಲಿ ದೃಢವಾಗಿ ನಿಂತಿದ್ದ ಒಂದು ಮರವನ್ನು ಬುಡ ಸಮೇತ ಕತ್ತರಿಸಿ ತೆಗೆಯಲಾಯಿತು. ಅದು ಮಸೀದಿ ಕಾರ್ಯಕಾರಿ ಸಮಿತಿ ಹಾಗೂ ಮಂಡಲ ಪಂಚಾಯ್ತಿ ವ್ಯಾಪ್ತಿಗೆ ಸಂಬಂಧಿಸಿದ ವಿಷಯವಾದರೂ ಅನವಶ್ಯಕವಾಗಿ ಬಹಿರಂಗವಾಗಿ ನಡೆದ ಒಂದು ಮರದ ಕೊಲೆ.

ಜಯಪುರಕ್ಕೆ ಜಿಲ್ಲಾ ಪರಿಷತ್ತಿನಿಂದ ಅಂಗೀಕೃತವಾಗಿದ್ದ 3 ಸರ್ಜನ್ ಹಾಗೂ ಇಬ್ಬರು ಮಹಿಳಾ ವೈದ್ಯರಿರುವ ಆಸ್ಪತ್ರೆಗೆ ಇಲ್ಲಿ ಸ್ಥಳ ನೀಡದಿಲ್ಲವಾದ್ದರಿಂದ ಸಮೀಪದ ಗ್ರಾಮವಾದ ಅಗಳಗಂಡಿಗೆ ಮಂಜೂರಾಗುವ ಸಂಭವವಿದೆ ಎನ್ನಲಾಗಿದೆ.

ಪ್ರತಿ ಭಾನುವಾರ ಜರುಗುವ ಸಂತೆಯು ಜಯಪುರದ ಸಿನಿಮಾ ಮಂದಿರದ ಕೆಳಗಿರುವ ರಸ್ತೆಯ ಇಕ್ಕೆಲಗಳಲ್ಲಿ ವ್ಯಾಪಾರಿಗಳಿಗೂ, ಗ್ರಾಹಕರಿಗೂ ಅಸಹ್ಯವನ್ನುಂಟು ಮಾಡುತ್ತಿದೆ. ಸಾರ್ವಜನಿಕ ಕೊಳಾಯಿಯಲ್ಲಿ ಬರುವ ನೀರನ್ನು ಮನುಷ್ಯರು ಕುಡಿಯುವಂತಿಲ್ಲ.

ಮಂಡಲ ಪ್ರಧಾನರು, ಮಂಡಲ ಪಂಚಾಯ್ತಿ ಸದಸ್ಯರುಗಳು ಈ ಮೇಲಿನ ವಿಷಯಗಳಲ್ಲಿ ನಿರ್ಲಕ್ಷ್ಯವಾಗಿದ್ದು, ಸೂಕ್ತ ಪರಿಹಾರದ ನಿರೀಕ್ಷೆಯಲ್ಲಿ ಜಯಪುರದ ಜನತೆ ದಿನ ತಳ್ಳುತ್ತಿದ್ದಾರೆ.

—ಪೂರ್ಣಿಮಾ. ಜಯಪುರ.

ಬೆಳೆಗಾರರೇ ಅಡಿಕೆ ಪತ್ರಿಕೆ ಬಗ್ಗೆ ಕಾಳಜಿ ವಹಿಸಬೇಕು

ಪ್ರಿಯ ಸಂಪಾದಕರೆ,

ಈಚೆಗೆ 'ಅಡಿಕೆ ಪತ್ರಿಕೆ' ಸಂಪಾದಕ 'ಶ್ರೀ' ಪಡ್ರೆಯವರು ಕೊಪ್ಪದಲ್ಲಿ ಬೆಳೆಗಾರರೊಂದಿಗೆ ನಡೆಸಿದ ವಿಚಾರ ವಿನಿಮಯದ ವಿವರಣೆ ನಿಮ್ಮ ಪತ್ರಿಕೆಯಲ್ಲಿ ವಿಚಾರ ನಿಷ್ಠವಾಗಿ ಬಹು ಚೆನ್ನಾಗಿ ಮೂಡಿಬಂದಿದೆ.

ಅಲ್ಪ ಸಮಯದಲ್ಲೇ ಅಪಾರ ಜನಮನ್ನಣೆ ಗಳಿಸಿರುವ ಅಡಿಕೆ ಪತ್ರಿಕೆಯನ್ನು ಬೆಳೆಗಾರರಿಗೆ ಪರಿಚಯಿಸಲು ಆರಂಭದಿಂದಲೂ ಪ್ರಚಾರ ನೀಡುತ್ತಿರುವ 'ಮುಂಜಾವು' ಪತ್ರಿಕೆಗೂ, ಬೆಳೆಗಾರರ ನಡುವೆ ಪತ್ರಿಕೆಯ ಪ್ರಸಾರ ಹೆಚ್ಚಿಸಲು ಪ್ರತಿಫಲಾಪೇಕ್ಷೆಯಿಲ್ಲದೆ ಶ್ರಮಿಸುತ್ತಿರುವ ಕೊಪ್ಪದ ಅಡಿಕೆ ಪತ್ರಿಕೆ ಏಜೆಂಟರೂ ಸ್ವತಃ ಬೆಳೆಗಾರರೂ ಆದ ವಸಂತ ಕುಮಾರ ಹರ್ಡೀಕರ್ ಅವರಿಗೂ ಧನ್ಯವಾದಗಳು.

ಪಡ್ರೆಯವರು ತಿಳಿಸಿದಂತೆ, ನಾವು ಬೆಳೆಗಾರರು ಮೊದಲಿಗೆ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕು. ಅಷ್ಟೇ ಸಾಲದು, ಅದನ್ನು ಆಸಕ್ತಿಯಿಟ್ಟು ಓದಿ, ಸಾಧ್ಯವಾದಷ್ಟೂ ಅನುಷ್ಠಾನಕ್ಕೆ ತರಬೇಕು. ಜೊತೆಗೆ ಗ್ರಾಮಾಂತರದ ಎಲ್ಲೆಡೆ ಈ ಪತ್ರಿಕೆಯ ಉಪಯುಕ್ತತೆಯನ್ನು ವಿವರಿಸಿ ಹೆಚ್ಚು ಹೆಚ್ಚು ಚಂದಾದಾರನನ್ನು ಮಾಡಿಸಬೇಕು. ಇದನ್ನು ಬೆಳೆಗಾರರೇ ಸ್ವತಃ ಅರಿತು ಮಾಡಬೇಕು ವಿನಃ ಸದ್ಯಕ್ಕೆ ಪತ್ರಿಕಾ ಬಳಗ ಇದನ್ನು ಮಾಡುವುದು ಕಷ್ಟದ ಕೆಲಸ.

ಕೃಷಿಯ ಬಗ್ಗೆ ಎಷ್ಟೋ ಪತ್ರಿಕೆಗಳು ಬಂದವು, ಹೋದವು ಆದರೆ ಯಾವುದೂ ಅಡಿಕೆ ಪತ್ರಿಕೆಯಷ್ಟು ಜನಪ್ರಿಯವಾಗಿಲ್ಲ. ಇಷ್ಟು ಉಪಯುಕ್ತ ಮಾಹಿತಿಯನ್ನು ನೀಡುವ ಪತ್ರಿಕೆಯನ್ನು ಬೆಳೆಗಾರರೆಲ್ಲಾ ಚಂದಾದಾರರಾಗಿ ಉಳಿಸಿಕೊಳ್ಳಬೇಕಾದ್ದು ಪ್ರಥಮ ಕರ್ತವ್ಯ. ಕಳೆದ ವರ್ಷ ಅಡಿಕೆ ತೋಟಕ್ಕೆ ಹಾನಿಯಾದಾಗ ಸಾವಿರಾರು ಜನ ಸರ್ಕಾರಕ್ಕೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿ ಮನೆಯಲ್ಲೇ ಕೂತರು. ಬೆಳೆಗಾರರಿಗೆ ಒಂದು ಪೈಸೆಯನ್ನೂ ಸರಕಾರ ಕೊಟ್ಟಿಲ್ಲ. ಕಾರಣ—ನಮ್ಮಲ್ಲಿ ಒಗ್ಗಟ್ಟಿಲ್ಲ ಬೆಳೆಗಾರರೆಲ್ಲಾ ಇಂಥದೊಂದು ಪತ್ರಿಕೆಯ ಚಂದಾದಾರರಾದಲ್ಲಿ ಪತ್ರಿಕೆಯ ಆರ್ಥಿಕ ಮಟ್ಟವೂ ಸುಧಾರಣೆಯಾಗಿ ಪತ್ರಿಕೆಯಲ್ಲಿ ಇನ್ನೂ ಅನುಭವಯುಕ್ತ ಲೇಖನಗಳು ಬರುವಂತೆ ಸಹಕಾರಿ ಆಗುವುದಲ್ಲದೇ, ಮುಂದೊಂದು ದಿನ ಅಡಿಕೆ ಪತ್ರಿಕೆಯ ಮೂಲಕವೇ ಅಡಿಕೆ ಬೆಳೆಗಾರರ ರಾಜ್ಯ ಮಟ್ಟದ ವೇದಿಕೆ ನಿರ್ಮಾಣವಾಗಿ, ಒಗ್ಗಟ್ಟಾಗಿ ತಮ್ಮ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಅನುಕೂಲವಾಗುತ್ತದೆಂಬುದರಲ್ಲಿ ಸಂಶಯವಿಲ್ಲ.

ಅಡಿಕೆ ಪತ್ರಿಕೆಯಲ್ಲಿ ನಮ್ಮೂರಿನ ಸುದ್ದಿಗಳು ಇನ್ನೂ ಅಷ್ಟಾಗಿ ಪ್ರಕಟವಾಗುತ್ತಿಲ್ಲ. ಅದರಲ್ಲೂ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ಹಾಗೂ ತೀರ್ಥಹಳ್ಳಿಯ ಬೆಳೆಗಾರರಲ್ಲಿ ಎಷ್ಟೋ ಜನ ಪ್ರಗತಿಪರ ಕೃಷಿಕರಿದ್ದು, ಇಲ್ಲಿಯ ಬೆಳೆಯ ಕ್ರಮ, ಮಾರುಕಟ್ಟೆ ಸಮಸ್ಯೆ, ರೋಗ, ಹೊಸ ವಿಧಾನಗಳು – ಸುಧಾರಣೆಗಳನ್ನು ಲೇಖನಗಳ ಮೂಲಕ ಹಂಚಿಕೊಂಡು ನಾವೇಕೆ ಈ

(4ನೇ ಪುಟಕ್ಕೆ)

ಅಕ್ರಮ : ಜಿ.ವಾ.ಪ್ರ. ಅಧಿಕಾರಿ ವಿರುದ್ಧ ಆರೋಪಗಳ ತನಿಖೆ, ವರದಿ ಸಲ್ಲಿಕೆ

ಚಿಕ್ಕಮಗಳೂರು : ಇಲ್ಲಿನ ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ ಕೆ. ಎ. ಪರಾಂಡೆಯವರ ವಿರುದ್ಧ ಹಲವು ಅಕ್ರಮಗಳ ಆರೋಪ ಮಾಡಲಾಗಿದ್ದು, ಇಲಾಖೆಯ ಮೈಸೂರು ವಿಭಾಗೀಯ ನಿರ್ದೇಶಕ ನಾಗಾಚಾರ್ ತನಿಖೆ ನಡೆಸಿ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಿದ್ದಾರೆ.

ಪ್ರಚಾರಾಂದೋಲನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಹೆಸರಲ್ಲಿ, ತರೀಕೆರೆ ತಾ॥ನಲ್ಲಿ 6 ದಿನದಲ್ಲಿ ಪತ್ರಕರ್ತರ 9 ಪ್ರವಾಸ ಏರ್ಪಡಿಸಿದ್ದೆಂದು, ಲೇಖನ ಬರೆದವರಿಗೆ ಹಾಗೂ ವಿವಿಧ ಬಿಲ್ ಪಾವ್ತಿಯಲ್ಲಿ ಕಡಿಮೆ ಹಣ ನೀಡಿ, ಕಳಪದಲ್ಲಿ ನಾಟಕ ಪ್ರದರ್ಶನವೆಂದು, 'ಕರ್ನಾಟಕ ಮುನ್ನಡೆ' ಪಾಕ್ಷಿಕ ಮುದ್ರಣಕ್ಕೆ ಕೊಟೇಶನ್ ಕರೆಯದೆ ಮನಸ್ವೀ ಆರ್ಡರ್ ನೀಡಿ—ಹೀಗೆ ನಾನಾ ರೀತಿಯಲ್ಲಿ ಹಣ ನುಂಗಿರುವುದು, ಪತ್ರಕರ್ತರಿಗೆ 'ಪಾರ್ಟಿ' ಎಂದು ಸುಳ್ಳು ಹೇಳಿ ವಿವಿಧ ಇಲಾಖೆಗಳಿಂದ ಸಂಗ್ರಹ, ವಾರ್ತಾ ಕಚೇರಿಯ ಟಿ.ವಿ.ಯನ್ನು ಸ್ವಂತಕ್ಕೆ ಮತ್ತು ಅಶ್ಲೀಲ ಚಿತ್ರ ನೋಡಲು ದುರುಪಯೋಗ, ಇವೇ ಮುಂತಾದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದಾಗಿ ನಾಗಾಚಾರ್ ಪತ್ರಕರ್ತರ ಸಂಘಕ್ಕೆ ತಿಳಿಸಿದ್ದಾರೆ.

ಪದಾಧಿಕಾರಿಗಳು

ಕೊಪ್ಪದ ಕೃಷಿ ವಿಚಾರ ವಿನಿಮಯ ಕೇಂದ್ರಕ್ಕೆ ಈ ಸಾಲಿನ ಅಧ್ಯಕ್ಷರಾಗಿ ಕರಿಮನೆ ಶ್ರೀನಿವಾಸ ಶರ್ಮ, ಕಾರ್ಯದರ್ಶಿಯಾಗಿ ಜಿ.ಕೆ. ವಿಜಯಕುಮಾರ್ ಹಾಗೂ ಖಜಾಂಚಿಯಾಗಿ ವಸಂತ ಕುಮಾರ್ ಹರ್ಡೀಕರ್ ಆಯ್ಕೆಯಾಗಿದ್ದಾರೆ.

ಗುಬ್ಬಗದ್ದೆ ಕಾಡು : ಸೆಕ್ಷನ್ 145ರ ಕ್ರಮಕ್ಕೆ ಸೆಶನ್ಸ್ ಕೋರ್ಟ್ ತಡೆಯಾಜ್ಞೆ

ಕೊಪ್ಪ ತಾ॥ ಕುಂಬಾರಕೊಪ್ಪ ಗ್ರಾಮದ ಗುಬ್ಬಗದ್ದೆ ಕಾಡಿನ ರಕ್ಷಣೆಯ ಬಗ್ಗೆ ಕೊಪ್ಪ ತಾ॥ ಮತ್ತು ಜಿಲ್ಲಾ ಪರಿಸರ ಜಾಗೃತಿ ವೇದಿಕೆಗಳ ವತಿಯಿಂದ ಚಿಕ್ಕಮಗಳೂರು ಸಿವಿಲ್ ನ್ಯಾಯಾಲಯದಲ್ಲಿ ಕೆ ಪಿ. ಪೂರ್ಣಚಂದ್ರ ತೇಜಸ್ವಿ ಮತ್ತು ಇತರರು ಹೂಡಿರುವ ಕಟ್ಲೆಳೆ ಮುಂದುವರಿದಿದೆ

ಈ ಮಧ್ಯೆ ಈ ಕಾಡಿನಲ್ಲಿ ಈಗಾಗಲೇ ಕಡಿಯಲಾಗಿರುವ 312 ಮರಗಳನ್ನು 'ರಿಸೀವರ್' ಮೂಲಕ ಸರ್ಕಾರದ ವಶಕ್ಕೆ ತೆಗೆದುಕೊಂಡು ಹರಾಜು ಮಾಡಿ ನಷ್ಟ ತಪ್ಪಿಸಲು ಹಾಗೂ ಈ ವಿವಾದ ಬಗೆಹರಿಯುವವರೆಗೆ ವಿವಾದಗ್ರಸ್ತ ಪ್ರದೇಶದೊಳಕ್ಕೆ ಯಾರೂ ಪ್ರವೇಶಿಸದಂತೆ ಪ್ರತಿಬಂಧಿಸಲು ಕೊಪ್ಪ ತಹಸೀಲ್ದಾರರು ಆರಂಭಿಸಿದ್ದ ಸಿಆರ್.ಪಿ.ಸಿ. ಸೆಕ್ಷನ್ 145ರ ಕ್ರಮಕ್ಕೆ ಎಚ್.ವಿ. ಶ್ರೀಧರ ... ದನ್ನು ಮತ್ತು ಇತರ ಮೂವರು (ಜಮೀನಿನ ಮಾಲಿಕರು) ಚಿಕ್ಕಮಗಳೂರು ಸೆಶನ್ಸ್ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ.

ಶೃಂಗೇರಿಯಲ್ಲಿ ನಾವಡರಿಗೆ ಶ್ರದ್ಧಾಂಜಲಿ

ಶೃಂಗೇರಿ: ಯಕ್ಷಗಾನ ಕಲೆಯ ಶ್ರೇಷ್ಠ ಕಲಾವಿದ ಕಾಳಿಂಗ ನಾವಡರ ನಿಧನಕ್ಕೆ ಸಂತಾಪ ಸೂಚಕ ಸಭೆ ಮೇ 30ರಂದು ಇಲ್ಲಿನ ಕಲಾರಂಗ ಹಾಗೂ ಚೈತನ್ಯ ಯುವಕ ಸಂಘಗಳ ಆಶ್ರಯದಲ್ಲಿ ನಡೆಯಿತು. ಪತ್ರಕರ್ತ ಪಾಂಡುರಂಗ ಅಧ್ಯಕ್ಷತೆ ವಹಿಸಿದ್ದು, ನೂತನ ಮಂಡಲ ಸದಸ್ಯ ಯು. ಎಸ್ ಶ್ರೀಧರ್, ಕಲಿಗೆ ಅನಿಲ್‌ಕುಮಾರ್, ಯುವ ಒಕ್ಕೂಟದ ನಿರ್ದೇಶಕ ಎಸ್. ಕೆ ನಾಗರಾಜ್ ಹಾಗೂ ಶಿವರಾಮ್ ಮುಖ್ಯ ಅತಿಥಿಗಳಾಗಿದ್ದರು.

ಪ್ರಾರಂಭದಲ್ಲಿ ಕಿಗ್ಗದ ರಾಜಯ್ಯ ನಾವಡರ ಭಾವ ಚಿತ್ರಕ್ಕೆ ದೀಪ ಬೆಳಗಿಸಿದರು. ಸಭೆಯು ದಿವಂಗತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಿತು. ಸಭೆಯಲ್ಲಿ ವೆಂ. ಪ್ರಸನ್ನ. ಜನಾರ್ದನ್, ಎಸ್. ಲಕ್ಷ್ಮೀನಾರಾಯಣ್, ಎಸ್ ವಿ. ರಮೇಶ್, ರಾಮಚಂದ್ರರಾವ್ ಮಾತನಾಡಿದರು. ಕ್ಯಾಸೆಟ್ ಪ್ರಪಂಚದಲ್ಲಿ ಅಪೂರ್ಣವಾಗಿ ಉಳಿದ ನಾವಡರ ಯೋಜನೆಗಳನ್ನು ಪೂರೈಸಲು ಪ್ರಯತ್ನಿಸುವುದಾಗಿ ನಾವಡರ ಕ್ಯಾಸೆಟ್‌ನ ಸಂಯೋಜಕ ಎಸ್. ವಿ. ರಮೇಶ್ ತಿಳಿಸಿದರು. ಲಕ್ಷ್ಮೀನಾರಾಯಣ್ ಅವರು, ತಾವೇ ರಚಿಸಿದ ಎರಡಕ್ಷರಗಳ ಕವನವನ್ನು ಓದಿ ನಾವಡರ ಸ್ಮರಣೆಗೆ ಅರ್ಪಿಸಿದರು.

ಶಂಕರ್ ಮೆಣಸೆ ಸ್ವಾಗತಿಸಿ, ಬಿ.ಎಲ್. ರವಿಕುಮಾರ್ ವಂದಿಸಿದರು. ಕೊನೆಯಲ್ಲಿ ನಾವಡರ ಜಯ ಘೋಷದೊಂದಿಗೆ ಸಭೆ ಮುಕ್ತಾಯವಾಯಿತು.

(ವರದಿ : ಪಾಪಣ್ಣ)

ಅಡಿಕೆ ಧಾರಣೆ

ಶಿವಮೊಗ್ಗ : 7-6-1990

ಸರಕು : 4379-4729

ಬೆಟ್ಟೆ : 3389-3849

ಗೊರಬಲು : 2225-2646

ಸಾಗರ

7-6-1990

ಇಡಿ : 3509-3765

ಆಪಿ : 4209-4499

ಚಾಲಿ : 2996-3166

ಸಿಪ್ಪೆ ಗೋಟು : 1416-1625

ಒಂದು ಜೊತೆ
ಗಾಡಿ ಎತ್ತುಗಳು
ಮಾರಾಟಕ್ಕಿವೆ.
ಆಸಕ್ತರು ವಿಚಾರಿಸಿ :
ರಾಮ ಪೂಜಾರಿ, ಹಳ್ಳಿಮನೆ
ಉತ್ತಮೇಶ್ವರ ಅಂಚೆ
ಕೊಪ್ಪ ತಾ॥

ಅನಾಗರಿಕ ವರ್ತನೆಯೇ ಕಾರಣ

(3ನೇ ಪುಟದಿಂದ)

ವಾರ್ಡಿನ ಹಾಸಿಗೆಯಲ್ಲಿ ನಾಯಿ ಮಲಗಿತ್ತೆಂದು ತಿಳಿಸಿರುವುದು ತೀರ ಉತ್ಪ್ರೇಕ್ಷೆಯಾಗಿದೆ. ಏಕೆಂದರೆ ಇಂಥ ಘಟನೆಗಳು ನೌಕರರ ನಿರ್ಲಕ್ಷ್ಯದಿಂದ ಆಗುವಂತಹುದೆಂದೆನಿಸಿದರೂ ಸಹ ಅಕ್ಕಪಕ್ಕದ ಹಾಸಿಗೆಗಳ ರೋಗಿಗಳು ಇದನ್ನು ನೋಡಿ ಸುಮ್ಮನಿರುವರೆ ?

ಈ ಆಸ್ಪತ್ರೆಯಲ್ಲಿ ದೊರೆಯುತ್ತಿರುವ ಕನಿಷ್ಠ ಸೌಲಭ್ಯಗಳಿಂದಲೇ ಕೆಲವು ದೊಡ್ಡ ಆಸ್ಪತ್ರೆಗಳಲ್ಲಿ ಮಾತ್ರ ನಡೆಯಬಹುದಾದ ಹಲವು ಅಪರೂಪದ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ. ಅಂತೆಯೇ, ಹಾಲಿ ಇರುವ ಸಿಬ್ಬಂದಿಯವರಿಂದಲೇ ಸಾರ್ವಜನಿಕರಿಗೆ ಗರಿಷ್ಠ ಪ್ರಮಾಣದಲ್ಲಿ ಸೇವೆ ನೀಡಲಾಗುತ್ತಿದೆ.

ಈ ಆಸ್ಪತ್ರೆಯನ್ನು ಮಾದರಿ ಆಸ್ಪತ್ರೆಯನ್ನಾಗಿ ಮಾಡಲು ಕೇವಲ ಅಧಿಕಾರಿಗಳು ಮತ್ತು ನೌಕರರಿಂದಲೇ ಸಾಧ್ಯವಿಲ್ಲ. ಈ ಬಗ್ಗೆ ಸಾರ್ವಜನಿಕರ, ಸಂಘ ಸಂಸ್ಥೆಗಳ ಹಾಗೂ ಇತರರ ಸಂಪೂರ್ಣ ಸಹಕಾರವೂ ಅತ್ಯವಶ್ಯಕ ಎಂಬುದನ್ನು ಸಾರ್ವಜನಿಕರ ಗಮನಕ್ಕೆ ತರಬಯಸುತ್ತೇನೆ.

—ಡಾ॥ ಎಂ.ಜಿ. ಪ್ರಸಾದ್,
ವೈದ್ಯಾಧಿಕಾರಿಗಳು, ಕೊಪ್ಪ.

ಬೆಳೆಗಾರರೇ ಕಾಳಜಿ ವಹಿಸಲಿ

(3ನೇ ಪುಟದಿಂದ)

ಯಶಸ್ವಿ ಮಾಧ್ಯಮಕ್ಕೆ ನಮ್ಮ ಪಾಲು ಸೇರಿಸಿ ಮುನ್ನಡೆಸಿಕೊಂಡು ಹೋಗಬಾರದು?

ನಮ್ಮ ರೈತ ಬಾಂಧವರುಗಳು ಈ ದಿಕ್ಕಿನಲ್ಲಿ ಯೋಚಿಸುತ್ತಾರೆಂದು ಆಶಿಸುತ್ತೇನೆ.

ಎಸ್. ಬಿ. ವೇದಮೂರ್ತಿ,
ಬೇಗಾರು.

(ವೇದಮೂರ್ತಿಯವರೂ ಈ ಕೆಲಸ ಮಾಡಲು ಈಗಾಗಲೇ ನಿರ್ಧರಿಸಿರಬಹುದು. ಯಾರೇ ಇರಲಿ, ಮೊದಲಿಗೆ ಉತ್ಸಾಹದಲ್ಲಿ ಒಂದೆರಡು ವರದಿ–ಲೇಖನ ಕಳಿಸಿ, ಅವು ಅಕಸ್ಮಾತ್ ಪ್ರಕಟವಾಗದಿದ್ದರೆ ನಿರಾಶರಾಗಬಾರದು. ಬಹುಶಃ ಅವು ಪತ್ರಿಕೆ ಹಾಕಿಕೊಂಡಿರುವ ಚೌಕಟ್ಟಿಗೆ ಹೊಂದಲಿಲ್ಲ ಎಂದು ಅರ್ಥ. ತಮ್ಮ ವಿಚಾರವನ್ನು ಯಾವ ರೀತಿ ಬರೆದರೆ ಅಥವಾ ಮಂಡಿಸಿದರೆ ಸಮರ್ಪಕವಾದೀತು ಎಂಬುದು ಪತ್ರಿಕೆಯನ್ನು ಸರಿಯಾಗಿ ಗಮನಿಸಿದರೆ ತಿಳಿಯುತ್ತದೆ. ಅಥವಾ ಪತ್ರಿಕಾ ಬಳಗದವರಿಗೇ ಬರೆದು ತಿಳಿದುಕೊಂಡು ಮಾರ್ಪಾಟು ಮಾಡಿಕೊಳ್ಳಬೇಕು. —ಸಂ.)

ಸೀತೂರು ಮಂಡಲ ಪಂಚಾಯ್ತಿ ಕಾರ್ಯಾಲಯ
ಸೀತೂರು, ನ.ರಾ. ಪುರ ತಾ॥, ದಿನಾಂಕ : 4.6.1990
ನೌಕರರ ವಸತಿ ಗೃಹದ ಸಾಮಗ್ರಿಗಳ ಹರಾಜು ಪ್ರಕಟಣೆ
ಸೀತೂರು ಮಂಡಲ ಪಂಚಾಯ್ತಿಯ ನೌಕರರ ವಸತಿ ಗೃಹವು ದುರಸ್ತಿ ಮಾಡಲಾಗದಷ್ಟು ಶಿಥಿಲಗೊಂಡಿದ್ದು, ಅದರಲ್ಲಿ ದೊರೆಯುವ ಸಾಮಗ್ರಿಗಳನ್ನು ದಿನಾಂಕ **20 6 1990ನೇ ಬುಧವಾರ ಬೆಳಿಗ್ಗೆ 11-00ಗಂಟೆಗೆ ಮಂಡಲ ಪಂಚಾಯ್ತಿ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು.** ಇಷ್ಟವುಳ್ಳವರು ಭಡ ಸವಾಲಿನಲ್ಲಿ ಭಾಗವಹಿಸಿ ಪಡೆದುಕೊಳ್ಳಬಹುದು. ಕಟ್ಟಡದಲ್ಲಿ ದೊರೆಯುವ ಸಾಮಗ್ರಿಗಳ ಮತ್ತು ಷರತ್ತುಗಳ ವಿವರವನ್ನು ಮಂಡಲ ಪಂಚಾಯ್ತಿ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಪ್ರಚುರಪಡಿಸಿರುತ್ತೆ.
(ಸಹಿ) ಕಾರ್ಯದರ್ಶಿ.

ವಿಜಯ್ ನರ್ಸರಿ
ಉತ್ತಮವಾಗಿ ಬೆಳೆಸಿದ ಕಾವೇರಿ, ರೋಬಸ್ಟಾ ಕಾಫಿ ಗಿಡಗಳು,
ಅಡಿಕೆ, ಕಾಳು ಮೆಣಸು, ಸಿಲ್ವರ್, ಜಾಯಿಕಾಯಿ ಗಿಡಗಳು
ದೊರೆಯುತ್ತವೆ.
ಜೆ. ಕೆ. ವಿಜಯ ಕುಮಾರ್ ಬಿ.ಎಸ್ಸಿ., (ಎಜಿ.)
ಮಹಿಳಾ ಸಮಾಜದ ಎದುರು,
☎ : 151 ಮತ್ತು 161 ಕೊಪ್ಪ

ಕಾಮಧೇನು ಎಂಟರ್‌ಪ್ರೈಸಸ್
ಮುಖ್ಯ ರಸ್ತೆ, ಕೊಪ್ಪ.
"ನಮ್ಮಲ್ಲಿ ನೀವು ದವಸ-ಧಾನ್ಯಗಳನ್ನು ಖರೀದಿಸುವಾಗ ಕಸ-ಕಡ್ಡಿ, ಹುಳು ಹುಪ್ಪಟೆ, ಮರಳು-ಕಲ್ಲುಗಳಿಗೂ ಹಣ ನೀಡಬೇಕೆಂದು ನಾವು ಅಪೇಕ್ಷಿಸುವುದಿಲ್ಲ" !!
ಕೊಪ್ಪದಲ್ಲಿ ಶುದ್ಧಗೊಳಿಸಿದ ದವಸ-ಧಾನ್ಯಗಳ ಏಕೈಕ ಅಂಗಡಿ !
ಸ್ಟೇಶನರಿ ಸಾಮಗ್ರಿಗಳೂ ದೊರೆಯುತ್ತವೆ.
ಮದುವೆ ಮುಂತಾದ ಸಮಾರಂಭಗಳಿಗೆ ಶುದ್ಧಗೊಳಿಸಿದ ದವಸ ಧಾನ್ಯಗಳನ್ನು ಸಿದ್ಧ ದಾಸ್ತಾನಿನಿಂದ ಸರಬರಾಜು ಮಾಡಲಾಗುವುದು.
ಪ್ರೊ.॥ ಎಂ. ಆರ್. ಕಣ್ಣನ್

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ